Sri S. C. VIRUPAKSHIAH.—May I know whether the wishes of such of those officers willing to come to Mysore will be given due deference ?

Sri T. MARIAPPA.—Certainly, Sir.

ಶ್ರೀ ಬಿ. ಹುಚ್ಚೇಗೌಡ.—ಗೆಜೆಟೆಡ್ ಅಧಿಕಾರಿಗಳಲ್ಲಿ ಹಿಂದಿನ ಮೈಸೂರು ಅಧಿಕಾರಿಗಳಿಗೂ ಈಗ ಹೊಸದಾಗಿ ಇತರ ಭಾಗಗಳಿಂದ ಬಂದಿರುವವರಿಗೂ ನಂಬಳದಲ್ಲಿ ವ್ಯತ್ಯಾಸವಿದೆಯಲ್ಲವೇ ?

ಶ್ರೀ ಟಿ. ಮರಿಯಪ್ಪ.—ಮುಂಬೈ, ಮದರಾಸು, ಹೈದರಾಬಾದು ಮತ್ತು ಕೊಡಗು ಈ ನಾಲ್ಕು ಭಾಗಗಳಲ್ಲಿಯೂ ಬೇರೆ ಬೇರೆ ಸ್ಕೇಲುಗಳಿರುವುದು ಎಲ್ಲ ಸದಸ್ಯರಿಗೂ ತಿಳಿದಿರುವ ವಿಷಯ.

ಶ್ರೀ ಬಿ. ಹುಚ್ಚೇಗೌಡ.—ಮುಂಬಯಿಯಿಂದ 571 ಗೆಜೆಟೆಡ್ ಅಧಿಕಾರಿಗಳೂ 676 ನಾನ್ ಗೆಜೆಟೆಡ್ ಅಧಿಕಾರಿಗಳೂ ಬಂದಿದ್ದಾರೆ ಎಂದು ಹೇಳಿದ್ದೀರಿ. ಇಷ್ಟು ಹೆಚ್ಚು ಸಂಖ್ಯೆಯಲ್ಲಿ ಗೆಜೆಟೆಡ್ ಅಧಿಕಾರಿಗಳು ಬಂದಿರುವುದಕ್ಕೆ ಕಾರಣವೇನು ?

ಶ್ರೀ ಟಿ. ಮರಿಯಪ್ಪ.—ಕನ್ನಡ ಮಾತನಾಡತಕ್ಕ ಅಧಿಕಾರಿಗಳು ಯಾರು ಯಾರು ಇಲ್ಲಿಗೆ ಬರಬೇಕೆಂದು ಇಷ್ಟಪಟ್ಟರೋ ಮತ್ತು ಸೆಕ್ರೆಟರಿಗಳ ಮಟ್ಟದಲ್ಲಿ ಅಂತರ ಪ್ರಾಂತ ಮಂತ್ರಿಗಳ ಮಟ್ಟದಲ್ಲಿ ಯಾರ್ಯಾರನ್ನು ತೆಗೆದುಕೊಳ್ಳಬೇಕೆಂದು ತೀರ್ಮಾನ ಮಾಡಿದರೋ ಆ ಪ್ರಕಾರ ತೆಗೆದುಕೊಂಡಿದೆ.

ಶ್ರೀ ವಿ. ಆರ್. ನಾಯ್ಡು.—ಮುಂಬಯಿ ರಾಜ್ಯದ ನಂಬಳದ ಸ್ಕೇಲು ಜಾರಿಗೆ ತರಬೇಕಾದರೆ ಏಳು ಕೋಟಿ ರೂಪಾಯಿಗಳು ಬೇಕಾಗುತ್ತವೆಂದು ಹೇಳಿದ್ದೀರಿ. ಈ ಹಣವನ್ನು ಕೇಂದ್ರ ಸರಕಾರದಿಂದ ತೆಗೆದುಕೊಳ್ಳುವುದಕ್ಕೆ ತಮಗೆ ಏನು ಕಷ್ಟ ?

ಶ್ರೀ ಟಿ. ಮರಿಯಪ್ಪ.—ಅದು ಉತ್ತರ ಕೊಡುವ ಪ್ರಶ್ನೆಯಲ್ಲ.

Sri A. R. PANCHAGAVI.—Has the Government fixed any time limit for bringing about a common scale of pay ?

Sri T. MARIAPPA.—It is not a common scale of pay, Sir, but it is a new scale and it would come into effect from 1st January 1957.

Sri S. C. VIRUPAKSHIAH.—Is the Government aware that the Government of Madras raised the scales of pay of officials in the month of October but gave no benefit to persons in the areas that came out of Madras State ?

Sri T. MARIAPPA.—I have only seen that information in the press ; I have not received any communication.

Release of Forest Lands for Cultivation.

Q.—47. Sri S. KARIAPPA (Virupakshapura).—

Will the Government be pleased to state :—

(*a*) whether they are receiving a number of representations for release of forest lands for cultivation ;

(*b*) whether they are aware that the pressure for such release is so heavy because the *per capita* land in the State is very low ;

(*c*) whether they are aware that unauthorised cultivation is almost universal ;

(*d*) whether they are in possession of figures as to the extent to which the unauthorised cultivation in State Forest has taken place ?

A.—Sri Kadidal MANJAPPA (Minister for Education) [On behalf of Sri H. S. Rudrappa (Minister for Agriculture)].—

(*a*) Yes.

(*b*) Yes, partly.

(*c*) No.

(*d*) The information readily available in respect of certain districts is given below :—

	Acres	*Guntas*
Bangalore Division	2,116	30
Chitaldrug ,,	11	00
Sagar ,,	148	28
(120 acres out of 148-28 have been ordered to be released)		
Shimoga Division	11	20
Bhadravathi ,,	34	00
Chikmagalur ,,	61	32
Hassan ,,	810	32
Dharwar ,,	84	29
Belgaum ,,	1,800	00

ಶ್ರೀ ಎಸ್. ಕರಿಯಪ್ಪ.—ಸಂಸ್ಥಾನದಲ್ಲಿ ತರೆಯೊಂದಕ್ಕೆ ಹಂಚಿಕೆಯಾಗುವ ಜಮೀನು ಕಡಮೆಯಾಗಿರುವುದರಿಂದ ಸ್ಟೇಟ್‌ಫಾರೆಸ್ಟ್‌ನಲ್ಲಿ ಜಮೀನು ರಿಲೀಸ್ ಮಾಡಿ ಎಂದು ಕೇಳುವುದು ಒಂದೇ ಮುಖ್ಯ ಕಾರಣವಲ್ಲದೆ ಇದ್ದರೆ ಬೇರೆ ಕಾರಣಗಳೇನು ?

ಶ್ರೀ ಕಡಿದಾಳ್ ಮಂಜಪ್ಪ.—ಜೀವನೋಪಾಯಕ್ಕೆ ಬೇರೆ ಮಾರ್ಗವಿಲ್ಲದೆ ಇರುವುದರಿಂದ ವ್ಯವಸಾಯಗಾರರ ಕುಟುಂಬದವರು ಜಮೀನು ಕೇಳುತ್ತಿದ್ದಾರೆ.

ಶ್ರೀ ಎಸ್. ಕರಿಯಪ್ಪ.—ಹಾಗೆ ಜಮೀನನ್ನು ಎಲ್ಲರಿಗೂ ಒದಗಿಸುವುದಕ್ಕೆ ಫಾರೆಸ್ಟ್‌ನಿಂದ ಜಮೀನು ರಿಲೀಸ್ ಮಾಡುವುದು ಒಳ್ಳೆಯದೆಂದು ಭಾವಿಸಿದ್ದೀರಾ?

ಶ್ರೀ ಕಡಿದಾಳ್ ಮಂಜಪ್ಪ.—ನಾಕಾದಷ್ಟು ಪ್ರಮಾಣದಲ್ಲಿ ಅರಣ್ಯವಿದ್ದಿದ್ದರೆ ಜಮೀನನ್ನು ರಿಲೀಸ್ ಮಾಡಬಹುದಾಗಿತ್ತು.

ಶ್ರೀ ಎಸ್. ಕರಿಯಪ್ಪ.—ಜಮೀನಿದ್ದರೆ ಕೊಡಬೇಕು ಅಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನು ರಿಲೀಸ್ ಮಾಡಿದ್ದೇವೆ. ಬೆಂಗಳೂರು ಜಿಲ್ಲೆಯಲ್ಲಿ ಕೂಡ ಅನೇಕ ಕಡೆಗಳಲ್ಲಿ ಅರಣ್ಯವನ್ನು ರಿಲೀಸ್ ಮಾಡಿದ್ದೇವೆ.

Sri A. R. PANCHAGAVI.—Are the Government aware that some of these lands were granted for cultivation during the Grow More Food Campaign ?

Sri Kadidal MANJAPPA.—I have no information.

Sri B. P. KADAM.—What is the percentage of land decided to be reserved for forest?

Sri Kadidal MANJAPPA.—Generally about 20 or 25 per cent.

Sri B. P. KADAM.—Would this benefit be given to all the districts?

Sri Kadidal MANJAPPA.—It cannot be done on district basis.

ಶ್ರೀ ಎಸ್. ಕರಿಯಪ್ಪ.—ಈಗ ಜಮೀನನ್ನು ಬಗರ್ ಹುಕುಂ ಸಾಗು ಮಾಡಿದ್ದಾರೆ. ಅವರೆಲ್ಲ ಜಮೀನಿಲ್ಲದವರು ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಜಮೀನು ಇಲ್ಲದವರೂ ಆಗಿರಬಹುದು, ಜಮೀನು ಇದ್ದವರೂ ಆಗಿರಬಹುದು.

ಶ್ರೀ ಎಸ್. ಕರಿಯಪ್ಪ.—ಸರ್ಕಾರದವರು investigate ಮಾಡಿ ಇಂಥವರು ಯಾರು ಎಂದು ನಿರ್ಧರ ಪಡಿಸಿಕೊಂಡಿಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—Investigate ಮಾಡಿರುವ ಬಗ್ಗೆ ನನ್ನ ಹತ್ತಿರ ವಿವರಗಳಿಲ್ಲ.

ಶ್ರೀ ಸಿ. ಟಿ. ಹನುಮಂತಯ್ಯ.—ಅರಣ್ಯ ಇಲಾಖೆ ಮತ್ತು ಅಮೃತ ಮಹಲ್ ಇಲಾಖೆಯಿಂದ ರೆವಿನ್ಯೂ ಇಲಾಖೆಗೆ ಜಮೀನನ್ನು ತೆಗೆದುಕೊಂಡಿದ್ದಾರೆ. ಅಂಥ ಜಮೀನನ್ನು ರೂಲ್ಸ್ ಪ್ರಕಾರ ಏಕ್‌ಸಾಲ್ ಸಾಗು ಪಳಿಗೆ ಕೊಟ್ಟಿರುವುದನ್ನು ಸರ್ಕಾರದವರು ಪಾಪಸು ತೆಗೆದುಕೊಳ್ಳುತ್ತಾರೆಯೇ?

Sri Kadidal MANJAPPA.—It is a hypothetical question. If specific instances are brought to the notice of Government, they would be dealt with on their own merits.

ಶ್ರೀ ಡಿ. ಎಂ. ಗೋವಿಂದರಾಜು.—ಜಮೀನಿಲ್ಲದೆ ಇರುವವರು ಅನಧಿಕೃತವಾಗಿ ಉಳುಮೆ ಮಾಡಿದ್ದರೆ ಅಂಥ ಸಂದರ್ಭಗಳಲ್ಲಿ ಜಮೀನನ್ನು ಅವರಿಗೆ ಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಕಾನೂನಿಗೆ ವಿರೋಧವಾಗಿ, ಅಕ್ರಮವಾಗಿ ಸಾಗುವಳಿ ಮಾಡಿದವರಿಗೆ ಅಂಥ ಸೌಲಭ್ಯವನ್ನು ಕೊಡುವುದಕ್ಕಾಗುವುದಿಲ್ಲ.

ಶ್ರೀ ಮಲ್ಲಿಕಾರ್ಜುನಪ್ಪಗೌಡ.—ಆಕಾರವಾಗಿರತಕ್ಕ ಜಮೀನನ್ನು ಅರಣ್ಯ ಇಲಾಖೆಯವರು ಅರಣ್ಯಕ್ಕೆ ಸೇರಿಸಿಕೊಂಡಿದ್ದರೆ ಅಂಥ ಜಮೀನುಗಳನ್ನು ಬಿಟ್ಟು ಕೊಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನು ಯೋಚನೆ ಮಾಡಬೇಕು. ಕೆಲವು ಸಂದರ್ಭಗಳಲ್ಲಿ ಬಿಟ್ಟು ಕೊಡುವುದಕ್ಕಾಗುವುದಿಲ್ಲ. ಕೆಲವು ಸಂದರ್ಭಗಳಲ್ಲಿ ಬಿಟ್ಟು ಕೊಡಬಹುದು.

ಶ್ರೀ ವಿ. ಮಸಿಯಪ್ಪ.—ಚಿತ್ರದುರ್ಗ ಜಿಲ್ಲೆಯಲ್ಲಿ ಅನೇಕ ಜನ ಫಾರೆಸ್ಟ್ ಲ್ಯಾಂಡನ್ನು ಕೇಳುತ್ತಿದ್ದರೂ ಕೂಡ ಇಲ್ಲಿಯವರೆಗೂ ರಿಲೀಸ್ ಮಾಡಿಕೊಡದೇ ಇರುವುದಕ್ಕೆ ಕಾರಣವೇನು?

Mr. SPEAKER.—That is too much of detail.

ಶ್ರೀ ಸಿ. ಟಿ. ಹನುಮಂತಯ್ಯ.—ಕೆಲವು ಕಡೆ ಏಕ್ ಸಾಲ್ ಕಲ್ಟಿವೇಷನ್ನಿಗೆ ಟಾಂಗ್ಯಾ ಸಿಸ್ಟಂ ಪ್ರಕಾರ ಜಮೀನು ಕೊಟ್ಟಿದೆ. ಈಗ ಅದನ್ನು ಕೊಡುವುದಿಲ್ಲ ಎಂದು ಹೇಳುತ್ತಿದ್ದಾರೆ. ಸರ್ಕಾರದವರನ್ನು ಕೊಡಿಸಿ ಕೊಡಿ ಎಂದರೆ ಅರ್ಜಿ ಕೊಡಿ ಎಂದು ಹೇಳಿದರು ಅರ್ಜಿ ಕೊಟ್ಟಾಯಿತು, ಇನ್ನೂ ಕೊಡಿಸಿ ಕೊಡದೇ ಇರುವುದಕ್ಕೆ ಕಾರಣವೇನು?

ಶ್ರೀ ಕಡಿದಾಳ್ ಮಂಜಪ್ಪ.—ನಿರ್ದಿಷ್ಟವಾದ ನಿದರ್ಶನವನ್ನು ಮಾನ್ಯ ಸದಸ್ಯರು ಸರ್ಕಾರದವರ ಗಮನಕ್ಕೆ ತಂದರೆ, ಅವುಗಳಿಗೆ ನೂಕ್ತ ಪರಿಹಾರ ಕಲ್ಪಿಸಿಕೊಡುವ ಯೋಚನೆ ಸರ್ಕಾರದವರು ಮಾಡುತ್ತಾರೆ.

ಶ್ರೀ ಸಿ. ಟಿ. ಹನುಮಂತಯ್ಯ.—ಈಗ ಸರ್ಕಾರದವರ ಗಮನಕ್ಕೆ ತಂದರೆ ಮಾಡಿಕೊಡುತ್ತೇವೆ ಎಂದು ಉತ್ತರ ಹೇಳುತ್ತಾರೆ. ತುರುವೇಕೆರೆ ತಾಲ್ಲೂಕು ಸಂಪಿಗೆ ಬನವರಾಜ ಅಮೃತಮಹಲ್ ಕಾವಲಿನಲ್ಲಿ ಜಮೀನು ಸರೆಂಡರ್ ಆಗಿ ನಾಲ್ಕೈದು ವರ್ಷವಾಗಿದೆ. ಅದರಲ್ಲಿ 150 ಹರಿಜನರ ಮನೆಗಳವರಿಗೆ ಕಾಲೋನಿ ಮಾಡಿಕೊಡಲು ಜಮೀನು ಅಕ್ಸಿಸಿಷ್ ಆಗಿದೆ. ಅದನ್ನು ಬಿಡಿಸಿಕೊಡಿ ಎಂದು ಕೇಳಿದರೆ ಬಿಡಿಸಿಕೊಡುತ್ತಿಲ್ಲ. ಕಾರಣವೇನು, ಸ್ವಾಮಿ?

ಅಧ್ಯಕ್ಷರು.—ಈ ರೀತಿ ಇಲ್ಲಿ ಉದಾಹರಣೆ ಕೊಟ್ಟು ಕೇಳುತ್ತಾ ಹೋದರೆ ಆಗುವುದಿಲ್ಲ. ಅದಕ್ಕೆ ಹೇಗೆ ಉತ್ತರ ಕೊಡುವುದು? ನಿಮಗೆ ನಿರ್ದಿಷ್ಟವಾಗಿ ಅಂಥ ಯಾವುದಾದರೂ ಸಂದರ್ಭ ಗೊತ್ತಿದ್ದರೆ ಮಿನಿಸ್ಟರ್ ರವರ ಚೇಂಬರ್ಸ್‌ಗೆ ಹೋಗಿ ಅವರ ಗಮನಕ್ಕೆ ತಂದರೆ ಆಗುತ್ತದೆ. ಇಲ್ಲಿ ಪ್ರಶ್ನೆ ಕೇಳಿದಾಕ್ಷಣಕ್ಕೇ ತಮ್ಮ ಸಮಸ್ಯೆ ನಿವಾರಣೆಯಾಗುತ್ತದೆ ಎಂದು ತಿಳಿದುಕೊಳ್ಳಬಾರದು.

ಶ್ರೀ ಸಿ. ಟಿ. ಹನುಮಂತಯ್ಯ.—ಹಾಗಲ್ಲ ದೇವರು. ಸರ್ಕಾರದವರ ಗಮನಕ್ಕೆ ತಂದರೂ ಕೂಡ ಇನ್ನೂ ಆಗಿಲ್ಲ. ಅದಕ್ಕೆ ಇರತಕ್ಕ ತೊಂದರೆ ಏನು ಎಂದು ಕೇಳುತ್ತಾ ಇದ್ದೇನೆ.

ಶ್ರೀ ಕಡಿದಾಳ್ ಮಂಜಪ್ಪ.—ನೋಟಿಸ್.

Sri Y. MANJAYYA SHETTY.—On a point of order, Sir. The Hon'ble Member who just now put the supplementary question, has addressed the Hon'ble Speaker as "Devaru"; "Devaru" means 'God'. May I know whether the Hon'ble Member is in order to address the Speaker as "Devaru"?

Mr. SPEAKER.—It is a delicate question; of course, it does not refer to any matter at all. Personally I would not like to be called as "Devaru". That is what I can say. But "Devaru" is very freely used in the whole of old Mysore State and I hope this habit will not spread to South Kanara.

ಶ್ರೀ ವಿ. ಆರ್. ನಾಯ್ಡು (ಮಲ್ಲೇಶ್ವರಂ).—ಸ್ವಾಮಿ, ಫಾರೆಸ್ಟ್ ಇಲಾಖೆಗೆ ಸಂಬಂಧಪಟ್ಟಂಥ ಜಮೀನುಗಳ ವಿಷಯದಲ್ಲಿ ಸರ್ಕಾರದವರು ಒಂದು ಕಡೆ ಅರಣ್ಯಕ್ಕೆ ಸಂಬಂಧಿಸಿದ ಜಮೀನುಗಳನ್ನು ಕೊಡುವುದಿಲ್ಲ ಎಂದು ಹೇಳುತ್ತಾರೆ, ಇನ್ನೊಂದು ಕಡೆ ಕೊಡುತ್ತೇವೆ ಎಂದು ಹೇಳುತ್ತಾರೆ. ಸರ್ಕಾರದ ನೀತಿಯಾದರೂ ಏನು? ಅರಣ್ಯ ಸಂಪತ್ತನ್ನು ಹೆಚ್ಚಿಸುವುದಲ್ಲವೇ?

Mr. SPEAKER.—We are not dealing with the policy of Government. You can ask only supplementary questions.

Members' representation.

ಶ್ರೀ ವಿ. ಆರ್. ನಾಯ್ಡು (ಮಲ್ಲೇಶ್ವರಂ).—ಮಾನ್ಯ ಸ್ಪೀಕರ್‌ರವರ ಅಪ್ಪಣೆ ಪಡೆದು, ಒಂದು ಸಮಾಚಾರವನ್ನು ತಮ್ಮ ಗಮನಕ್ಕೆ ತರಬೇಕೆಂದು ಇದ್ದೇನೆ. ಪಾರ್ಲಿಮೆಂಟರಿ ಸಂಪ್ರದಾಯ ನೋಡಿದ್ದೇ ಆದರೆ ಶಾಸನ ಸಭೆಗಳಲ್ಲೂ ಕೂಡ ಅದರಲ್ಲೂ ಇಂಥಾ ಭವ್ಯವಾದ ಭವನದಲ್ಲಿ ರಾಷ್ಟ್ರನಾಯಕರ ಪೋಚೋ ಇರಬೇಕಾಗಿತ್ತು. ಇಲ್ಲಿ ಇಲ್ಲ. ಎರಡನೆಯದಾಗಿ ಜಗತ್ತಿಗೇ ಪ್ರಖ್ಯಾತವಾದ ಈ ವಿಧಾನ ಸೌಧವನ್ನು ಕಟ್ಟಿರುವಾಗ ಅನ್ನದಾನ ಮಾಡಬೇಕಾಗಿತ್ತು. ಅದೂ ಮಾಡಿಲ್ಲ. ಮೂರನೆಯದಾಗಿ ಈ ಶಾಸನ ಸಭೆಯ ಭವನವನ್ನು ಕೈಕೊಂಡಂಥ ಮೈಸೂರಿನ ಪ್ರಖ್ಯಾತ ಇಂಜನಿಯರುಗಳಿಗೆ ಸನ್ಮಾನ್ಯತೆ ಮಾಡಬೇಕಾಗಿತ್ತು. ಅದನ್ನೂ ಮಾಡಿಲ್ಲ. ತಾವು ಈ ಒಂದು ಸಂತೋಷ ಸಮಾರಂಭದಲ್ಲಿ ಅಧ್ಯಕ್ಷ ಪೀಠ ವಹಿಸಿರುವುದು ನಮಗೆಲ್ಲಾ ತುಂಬ ಸಂತೋಷ. ತಮ್ಮ ಕಾಲದ ಲ್ಲಾದರೂ, ನಮಗೆಲ್ಲಾ ಅನ್ನದಾನ ಮಾಡದಿದ್ದರೂ ಜಗತ್ ಪ್ರಖ್ಯಾತವಾದ ವಿಧಾನ ಸಭೆಯಲ್ಲಿ ಎಲ್ಲರಿಗೂ ಒಂದೊಂದು ಕಪ್ಪು ಟೀ ಆದರೂ ಕೊಟ್ಟರೆ ಬಹಳ ಸಂತೋಷ. (ನಗು !)

ಅಧ್ಯಕ್ಷರು.—ಇದು ಒಳ್ಳೆಯದೇ ಆಗಿದೆ. ಆದರೆ ಈ ವಿಷಯದಲ್ಲಿ ನನ್ನನ್ನು ಕೇಳುವುದಕ್ಕಿಂತ ಸರ್ಕಾರದ ವರನ್ನು ಕೇಳಿದ್ದರೆ ಚೆನ್ನಾಗಿತ್ತು. ನಾನೇನೋ ಸಂತೋಷದಿಂದ ಮಾಡುತ್ತಾ ಇದ್ದೆ. ಸಂತರ್ಪಣೆ ಮಾಡುವುದು ಎಂದರೆ ಜನಗಳನ್ನು ಕರೆಯಬೇಕು. ಅದು ನಮಗೆ ಸಂಬಂಧಿಸಿದುದಲ್ಲ. ಆದರೆ ನಾನು ಕೆಲವು ವಿಷಯಗಳನ್ನು ವಿಚಾರ ಮಾಡಿದ್ದೇನೆ. ಏನೆಂದರೆ ಈ ಸುಂದರವಾದ ಅಸೆಂಬ್ಲಿ ಹಾಲ್‌ನಲ್ಲಿ ನಮ್ಮ ದೇಶದ ಪಿತಾಮಹರಾದಂಥ ಗಾಂಧೀಜಿ ಯವರ ಒಂದು ಚಿತ್ರ ಇರಬೇಕೆಂದು ತಿಳಿದು ಅದನ್ನು ಹಾಕಿಸಲು ನಿರ್ಧಾರ ಮಾಡಿದ್ದೇನೆ. ಸ್ವಲ್ಪ ದಿವಸದಲ್ಲಿ ಅದರ ಅನಾವರಣ ಆಗಬಹುದು ಎಂದು ನನಗನ್ನಿಸುತ್ತದೆ. ಅದರಂತೆ ನಮ್ಮ ಪ್ರೆಸಿಡೆಂಟರಾದ ರಾಜೇಂದ್ರ ಪ್ರಸಾದರ ಒಂದು ಚಿತ್ರ ಅನಾವರಣ ಆಗಬೇಕು ಮತ್ತು ನಮ್ಮ ದೇಶದ ನಮ್ಮ ಲೀಡರ್ಸ್ ಯಾರು ಯಾರು ಇದ್ದಾರೆಯೋ ಅವರ ಚಿತ್ರಗಳನ್ನು ಇಂಥ ಸುಂದರವಾದ ಸಭಾಂಗಣದಲ್ಲಿ ಅನಾವರಣ ಮಾಡಬೇಕು ಎಂದು ಆಶೆ ಇಟ್ಟುಕೊಂಡಿದ್ದೇನೆ.

ಶ್ರೀ ಬಿ. ಹುಚ್ಚೇಗೌಡ.—ನಮ್ಮ ಹಿಂದಿನ ಅಸೆಂಬ್ಲಿ ಹಾಲ್‌ನಲ್ಲೂ ಇತ್ತು.

ಅಧ್ಯಕ್ಷರು.—ಅದನ್ನೇ ತಂದು ಹಾಕೋಣ, ಅಥವಾ ಇನ್ನೇನಾದರೂ ಮಾಡೋಣ.

ಶ್ರೀ ಬಿ. ಹುಚ್ಚೇಗೌಡ.—ಅದನ್ನು ಇಲ್ಲಿ ತಂದು ಹಾಕದೇ ಇರುವುದಕ್ಕೆ ಕಾರಣವೇನು ?

ಅಧ್ಯಕ್ಷರು.—ಅನಾವರಣ ಮಾಡುವ ಒಂದು ಸಮಾರಂಭ ಮಾಡಿ ಹಾಕಬೇಕೆಂದು ಇದೆ.

Issue of passes to visitors' Gallery.

ಶ್ರೀ ಆರ್. ಅನಂತರಾಮ್ (ಚಾಮರಾಜಪೇಟೆ).—ಪ್ರೇಕ್ಷಕರಿಗೆ ಪಾಸ್ ಕೊಡಬೇಕಾದರೆ ಮೆಂಬರ್ಸ್ ಸೈನ್ ಮಾಡಿಕೊಡ ಬೇಕು. ಅದರಿಂದ ಕಷ್ಟ ವಾಗುತ್ತದೆ. ಆ ಪದ್ಧತಿಯನ್ನು ರದ್ದು ಮಾಡುವುದು ಒಳ್ಳೆಯದು ಎಂದು ಕಾಣುತ್ತದೆ. ಡೈರೆಕ್ಟಾಗಿ ಅವರಿಗೇ ಪಾಸ್ ಕೊಡುವುದು ಒಳ್ಳೆಯದು.

ಅಧ್ಯಕ್ಷರು.—ಪ್ರಶ್ನೆ ಹೀಗಿದೆ. ಇಂಥ ಪ್ರಶ್ನೆ ಗಳನ್ನು ಅಸೆಂಬ್ಲಿಯಲ್ಲಿ ನಾವು ಚರ್ಚೆ ಮಾಡುವುದ ಕ್ಕಿಂತಲೂ ನನ್ನ ಕೊಟಡಿಯಲ್ಲಿ ಚರ್ಚೆ ಮಾಡಿದರೆ ಚೆನ್ನಾಗಿರುತ್ತದೆ. ಬೇರೆಬೇರೆ ಅಸೆಂಬ್ಲಿಗಳಲ್ಲಿ ಬೇರೆ ಬೇರೆ ರೀತಿಯಿಂದ ಪಾಸ್‌ಗಳನ್ನು ಕೊಡಲಾಗುತ್ತಿದೆ. ಇಲ್ಲಿ ಪಾಸ್ ಕೊಡಬೇಕಾದರೆ ಮೆಂಬರುಗಳು ತಮ್ಮ ರುಜು ಮಾಡಬೇಕಾಗುತ್ತದೆ, ಇದರಿಂದ ಕಷ್ಟ ವಾಗುತ್ತಿದೆ ಎಂದು ಹೇಳಿದರು. ಇದನ್ನು ನಾನು ವಿಚಾರ ಮಾಡುತ್ತೇನೆ. ಆಮೇಲೆ ಇದಕ್ಕೆ ಏನಾದರೂ ಒಂದು ಎಲ್ಲರಿಗೂ ಉಪಯೋಗವಾಗುವಂಥ ರೀತಿ ಯನ್ನು ಹುಡುಕಿ ತೆಗೆಯೋಣ.

Governor's Reply to the Motion of Thanks.

ಅಧ್ಯಕ್ಷರು.—ಗವರ್ನರ್ಸ್ ಅಡ್ರೆಸ್ಸಿಗೆ ಅಭಿ ನಂದನಾ ಪ್ರಸ್ತಾಪವನ್ನು ಕಳುಹಿಸಲಾಗಿತ್ತು. ಅದಕ್ಕೆ ಅವರು ಉತ್ತರ ಕೊಟ್ಟಿದ್ದಾರೆ.

"To

The Members of the Legislative Assembly.

I have received with great satisfaction the expression of their thanks for the speech with which I opened the December Session 1956, for both the Houses of the Legislature.

JAYA CHAMARAJA WADIYAR,
Governor."

Ordinances issued by the Governor.

Mr. SPEAKER.—Speaking on the Voting of Demands for Grants yesterday Hon'ble Member, Sri B. Huchegowda wanted me to examine whether the issue of three Ordinances by the Governor under section 70 of the States Reorganisation Act was in order. He stated that while this section empowered the Governor to issue one Ordinance to authorise expenditure for the five months from 1st November, the section did not permit of the issue of more than one Ordinance.

At the outset, I may mention that it is not the province of the Speaker to examine the legality or constitutionality of Ordinances issued by the Governor